ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಹೌದು.

ಆ) ಅಂದಾಜು ವೆಚ್ಚ ರೂ. 44.55 ಲಕ್ಷಗಳು. ಕೇಂದ್ರ ಸರ್ಕಾರದಿಂದ ರೂ. 18.00 ಲಕ್ಷ ನಿರೀಕ್ಷಿಸಿದ್ದು, ಜಿಲ್ಲಾ ಪಂಚಾಯತ್‌ನಿಂದ ರೂ. 10.00 ಲಕ್ಷ ಹಾಗೂ ಉಳಿದ ಹಣವನ್ನು ಲೋಕಸಭಾ, ವಿಧಾನಸಭಾ ಹಾಗೂ ವಿಧಾನ ಪರಿಷತ್ ಸದಸ್ಯರುಗಳ ಅನುದಾನದಲ್ಲಿ ಹಾಗೂ ಸಾರ್ವಜನಿಕ ವಂತಿಕೆ ಮೂಲಕ ಸಂಗ್ರಹಿಸಲಾಗುವುದು.

ಇ) ಹೌದು.

ವಿಳಂಬ ಪ್ರಕರಣಗಳು ವರದಿಯಾಗಿಲ್ಲ.

ಈ) ಅನುಕೂಲ ಮಾಡಿಕೊಡಲಾಗುತ್ತಿದೆ.

ಚಿಂತಾಮಣಿ ಕ್ಷೇತ್ರದಲ್ಲಿ ಶಿಥಿಲಗೊಂಡಿರುವ ಹೆದ್ದಾರಿ ದುರಸ್ತಿಗೊಂಡಿರುವ ಹೆದ್ದಾರಿ ದುರಸ್ತಿಗೊಳಿಸುವುದು

625 (297) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚೀಳೂರು ಹೋಬಳಿ ಚಾಕ್‌ವೇಲ್ ಗ್ರಾಮದಿಂದ ರಾಶ್ಚೆರುವುವರೆಗೆ ಹೆದ್ದಾರಿ ರಸ್ತೆಯು ಬಹಳ ಶಿಥಿಲಗೊಂಡು ಸಾರ್ವಜನಿಕರಿಗೆ, ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರವು ಈ ರಸ್ತೆ ದುರಸ್ತಿ ಮಾಡಿ ಡಾಂಬರೀಕರಣ ಮಾಡಲು ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಮರಳಿನ ಸಾಗಾಣಿಕೆಯ ಭಾರಿ ವಾಹನಗಳ ಸಂಚಾರದಿಂದ ಈ ರಸ್ತೆಯು ಹಾನಿಗೊಳ್ಳುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆ.

ಆ) ಈ ಜಿಲ್ಲಾ ಮುಖ್ಯ ರಸ್ತೆಯನ್ನು ಅನುದಾನದ ಲಭ್ಯತೆಯ ಅನುಸಾರ ಉಸ್ತುವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು

ಚಿಂತಾಮಣಿ ಕ್ಷೇತ್ರದ ನಲ್ಲಗುಟ್ಲಹಳ್ಳಿ ಬಳಿ ಸೇತುವೆ ನಿರ್ಮಾಣ

626 (298) ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚೀಳೂರಿನಿಂದ ಬಾಗೇಪಲ್ಲಿಗೆ ಹೋಗುವ ಮುಖ್ಯ ರಸ್ತೆಯ ನಲ್ಲಗುಟ್ಟಹಳ್ಳಿ ಬಳಿ ಸೇತುವೆ ಇಲ್ಲದೆ, ವಾಹನ ಸಂಚಾರಕ್ಕೆ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಸ್ಥಳದಲ್ಲಿ ಕಾಸ್‌ವೇ ಉಪಯೋಗಕ್ಕೆ ಬಾರದೇ ಸಾರ್ವಜನಿಕರ ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದ್ದರೂ ಸಹ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ನಿರ್ಲಕ್ಷಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಕಾಸ್‌ವೇ ಬದಲಾಗಿ ಸೇತುವೆ ನಿರ್ಮಾಣ ಮಾಡುವ ವಿಷಯ ಸರ್ಕಾರದ ಮುಂದಿದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಹೌದು, ಬಂದಿದೆ.

ಆ) ಹೊಸದಾಗಿ ಸೇತುವೆ ನಿರ್ಮಿಸುವುದನ್ನು ಪರಿಗಣಿಸಲಾಗುವುದು

ಇ) ಜಿಲ್ಲಾ ಮುಖ್ಯ ರಸ್ತೆ ಮೇಲಿನ ಈ ಕಾಸ್‌ವೇ ಬದಲಾಗಿ ಸೇತುವೆ ಪ್ರಸ್ತಾವನೆಯನ್ನು ಅನುದಾನದ ಲಭ್ಯತೆಯ ಮೇರೆಗೆ ಪರಿಶೀಲಿಸಲಾಗುವುದು.

ಚಿಂತಾಮಣಿ ನಗರದ ಕ್ರೀಡಾಂಗಣ

627 (759) ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಂತಾಮಣಿ ನಗರದಲ್ಲಿ ನಿರ್ಮಿಸಿರತಕ್ಕಂತಹ ಕ್ರೀಡಾಂಗಣಕ್ಕೆ ಇದುವರೆವಿಗೂ ಮಂಜೂರಾದ ಹಣ ಮತ್ತು ದಿನಾಂಕವನ್ನು ತಿಳಿಸುವುದು?

ಆ) ಈ ಕ್ರೀಡಾಂಗಣದ ಮುಂದೆ ಜೋಡಿ ರಸ್ತೆ ಪಕ್ಕದಲ್ಲಿ ಎಷ್ಟು ಅಂಗಡಿಗಳನ್ನು ನಿರ್ಮಿಸಲಾಗಿದೆ ಹಾಗೂ ಎಷ್ಟು ಅಂಗಡಿಗಳಿಂದ ಬಾಡಿಗೆ ಬರುತ್ತಿದೆ, ಈ ಬಾಡಿಗೆಯನ್ನು ಸ್ಥಳೀಯ ಕ್ರೀಡಾಭಿವೃದ್ಧಿಗೆ ಖರ್ಚು ಮಾಡಲಾಗುತ್ತಿದೆಯೇ?

ಇ) ಈ ಕ್ರೀಡಾಂಗಣದಲ್ಲಿ ಯಾವ ಯಾವ ಕ್ರೀಡೆಗೆ ಉಪಯೋಗವಾಗುತ್ತಿದೆ?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ರಾಜ್ಯ ವಲಯದಿಂದ ಬಿಡುಗಡೆಯಾದ ಮೊತ್ತ:-

ಅ) ದಿ: 18.02.92 ರಂದು. ರೂ. 5.00,000/-

2) ದಿ: 31.03.94 ರಂದು ರೂ. 5,00,000/-

ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಮೊತ್ತ

ದಿ:31-03-94 ರಂದು ರೂ.7,76,700/-

ಒಟ್ಟು ರೂ.17,76,700

ಆ) 102 ಮಳಿಗೆಗಳನ್ನು ನಿರ್ಮಿಸಲಾಗಿದೆ. 40 ಮಳಿಗೆಗಳಿಂದ ಬಾಡಿಗೆ ಬರುತ್ತಿದೆ. ಈ ಬಾಡಿಗೆಯನ್ನು ಕ್ರೀಡಾಭಿವೃದ್ಧಿಗೆ ಖರ್ಚು ಮಾಡಲಾಗುತ್ತಿದೆ.

ಇ) ಫುಟ್‌ಬಾಲ್, ಅಥ್ಲೆಟಿಕ್ಸ್, ಕ್ರಿಕೆಟ್, ವಾಲಿಬಾಲ್, ಕಬ್ಬಡಿ ಇತ್ಯಾದಿ ಕ್ರೀಡೆಗಳು.

ಚಿಂತಾಮಣಿ ಕ್ಷೇತ್ರದಲ್ಲಿ ಅಕ್ರಮ ಸಾಗುವಳಿ ಸಕ್ರಮ ಗೊಳಿಸುವುದು

628 (760) ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡಲು ಎಷ್ಟು ಅರ್ಜಿಗಳು ವಿಲೇ ಆಗದೆ ಬಾಕಿ ಇವೆ?

ಆ) ಈ ಅರ್ಜಿಗಳು ಕ್ರೂಢೀಕೃತಗೊಳ್ಳಲು ಸಾಕಷ್ಟು ಭೂಮಾಪನ ಅಧಿಕಾರಿಗಳು ಇಲ್ಲದೆ ಇರುವುದರಿಂದ ವಿಲೇ ಆಗದೆ ಇರುವುದು ನಿಜವೆ;